ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ಹರಿಹರ
ಸಿಸಿ 27/2016

ಪಿ ಡಬ್ಲ್ಯೂ-33

ಸಾಕ್ಷಿಯ ಹೆಸರುಃ ಶಿವಮೂರ್ತಪ್ಪ ಸಿ ಡಬ್ಲ್ಯೂ-33

ತಂದೆಯ ಹೆಸರುಃ ಕೆ ಎಂ ನಿಂಗಪ್ಪ

ವಯಸ್ಸುಃ 53

ಉದ್ಯೋಗಃ ವ್ಯವಸಾಯ

ವಾಸಸ್ಥಳಃ ತ್ಯಾವಣಿಗಿ

ಸಾಕ್ಷಿಯನ್ನು ದಿನಾಂಕ ಃ03 .03.2020 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು
ಮುಖ್ಯ ವಿಚಾರಣೆಃ ಸ ಸ ಅ ರವರಿಂದಃ

ನಿಂಗಪ್ಪ ಎನ್ನುವವರು ನನ್ನ ತಂದೆ . ಹನುಮಕ್ಕ ನನ್ನ ತಾಯಿ. ಆರೋಪಿ ನನಗೆ ಗೊತ್ತು. 2010 ರಲ್ಲಿ ನಮ್ಮ ಜಮೀನಿನಲ್ಲಿ ಭತ್ತ ಬೆಳೆದಿದ್ದೆ. ಸದರಿ ಭತ್ತದ ವಿಚಾರವಾಗಿ ರೈಸ್ ಮಿಲ್ಲನಲ್ಲಿ ಆರೋಪಿಯೊಂದಿಗೆ ಮಾತನಾಡಿದ್ದೆ. ಒಂದು ಕ್ವಿಂಟಲ್ ಗೆ 1300/- ರಂತೆ 439 ಚೀಲವನ್ನು ವೈ ಬ್ರಿಡ್ಜನಲ್ಲಿ ತೂಕ ಮಾಡಿಸಿ ಲಾರಿಯಲ್ಲಿ ಹೇರಿಸಿ ರೈಸ್ ಮಿಲ್ಲನಲ್ಲಿ ಆರೋಪಿ ಹೇಳಿದಂತೆ ಇಡಿಸಿರುತ್ತೇವೆ. ಸದರಿ ಭತ್ತಕ್ಕೆ ಎಷ್ಟು ಮೊತ್ತ ಆಗಿತ್ತು ಎಂದು ಈಗ ನೆನಪು ಇಲ್ಲ. ಅದರಲ್ಲಿ ಎಷ್ಟು ಹಣ ಕೊಟ್ಟಿದ್ದ ಎಂದು ಗೊತ್ತಿಲ್ಲ. ಇನ್ನೂ ಎಷ್ಟು ಹಣ ಕೊಡಬೇಕು ಎಂದು ಗೊತ್ತಿಲ್ಲ. ಆರೋಪಿ ನನಗೆ ಹಣ ಕೊಡುವುದು ಬಾಕಿ ಇರುತ್ತದೆ, ಒಂದು ತಿಂಗಳು ಬಿಟ್ಟು ಕೊಡುತ್ತೇನೆ ಎಂದು ಹೇಳಿದ್ದ. ನಂತರ ಅವರು ಓಡಿ ಹೋಗಿರುತ್ತಾನೆ ಎಂದು ಗೊತ್ತಾಗಿರುತ್ತದೆ. ನಾನು ಅಲ್ಲಿಗೆ ಹೋಗಿರುತ್ತೇನೆ ನಂತರ ಎಲ್ಲರೂ ಮಲೇಬೆನ್ನೂರು ಠಾಣೆಗೆ ಹೋಗಿ ಪಿರ್ಯಾದಿ ಕೊಟ್ಟಿರುತ್ತಾರೆ ನಾನು ಪಿರ್ಯಾದಿ ಕೊಟ್ಟಿರುತ್ತೇನೆ. ಆರೋಪಿ ನನಗೆ ಮೋಸ ಮಾಡಿರುತ್ತಾನೆ. ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾನೆ.

( ಈ ಹಂತದಲ್ಲಿ ಸಾಕ್ಷಿ ಭಾಗಶಃ ಪ್ರತಿಕೂಲ ಆಗಿದೆ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಬೇಕೆಂದು ಸಸಅ ರವ ರು ಕೋರಿದ್ದು , ಕೋರಿಕೆಯನ್ನು ಮನ್ನಿಸಲಾಯಿತು).

ಪಾಟೀ ಸವಾಲುಃ ಸಸಅ ರವರಿಂದಃ

ಸದರಿ 439 ಚೀಲ ಮೊತ್ತದ ಬಾಬ್ತು 4,56,170/- ಆಗಿದ್ದು ಅದರಲ್ಲಿ 3,50,000 ರೂಗಳನ್ನು ಆರೋಪಿ ನನಗೆ ಕೊಟ್ಟಿರುತ್ತಾನೆ ಹಾಗೂ ಉಳಿದ 1,06170/- ರೂಗಳನ್ನು ನನಗೆ ಕೊಟ್ಟಿಲ್ಲ ಎನ್ನುವುದು ನಿಜ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಆರ್ ಪಿ ವಕೀಲರಿಂದಃ**

ಚಾಂದ್‌ಪೀರ್ ಗೊತ್ತಿಲ್ಲ. ನಾನು ಮತ್ತು ಚಾಸಾ 37 ನ್ಯಾಯಾಲಯದ ಹೊರಗೆ ನಾವಿಬ್ಬರು ಮತನಾಡುತ್ತಾ ನಿಂತಿದ್ದೆವು ಅಂದರೆ ಸಾಕ್ಷಿ ಇಬ್ಬರು ಮಾತನಾಡುತ್ತಾ ಕುಳಿತಿದ್ದೆವು ಎಂದು ಹೇಳುತ್ತಾರೆ. ಚಾಸಾ 37 ರವರು ಸಾಕ್ಷಿ ಹೇಳಿ ಬಂದ ನಂತರ ಅವರನ್ನು ನಾನು ಮಾತನಾಡಿಸಿರುತ್ತೇನೆ ಅಂದರೆ ಸರಿಯಲ್ಲ. ಮಲೇಬೆನ್ನೂರು ಠಾಣೆಯಲ್ಲಿ ನಾನು ಪಿರ್ಯಾದಿಯನ್ನು ಕೊಟ್ಟು ಹೇಳಿಕೆಯನ್ನು ಸಹ ಕೊಟ್ಟು ಬಂದಿರುತ್ತೇನೆ. ನಾನು ಕೊಟ್ಟ ಪಿರ್ಯಾದಿಯ ಮೇಲೆ ಪೋಲಿಸಿನವರು ಏನು ಕ್ರಮ ತೆಗೆದುಕೊಂಡಿರುತ್ತಾರೆ ಎಂದು ಗೊತ್ತಿಲ್ಲ. ಚಾಸಾ 32 ರವರ ಎಷ್ಟು ಚೀಲ ಭತ್ತ ಮತ್ತು ಅವರಿಗೆ ಎಷ್ಟು ಮೊತ್ತ ಬರಬೇಕು ಎಂದು ಗೊತ್ತಿಲ್ಲ. ಅವರ ಬಗ್ಗೆ ನಾನು ಹೇಳಿಕೆಯನ್ನು ಕೊಟ್ಟಿಲ್ಲ. ನಮ್ಮ ಗ್ರಾಮದ ಮಾಳಗೇರ ಜಯಪ್ಪ - - - - - - - - - 63,190/- ರೂ ಕೊಡಬೇಕಾಗಿದೆ ಎಂದು ಓದಿ ಹೇಳಲಾದ ಹೇಳಿಕೆಯ ಭಾಗವನ್ನು ಸಾಕ್ಷಿ ಅಲ್ಲ ಎಂದು ಅಲ್ಲಗಳೆದಿದ್ದರಿಂದ ಸದರಿ ಹೇಳಿಕೆಯ ಭಾಗವನ್ನು ನಿಡಿ 10 ಎಂದು ಗುರುತಿಸಲಾಯಿತು. ಆರೋಪಿಗೆ ನಾನು ಭತ್ತ ಕೊಡುವ ಒಂದು ವರ್ಷದ ಮೊದಲನಿಂದಲೂ ಪರಿಚಯ. ಆರೋಪಿಯ ಸ್ವಂತ ಊರು ನಂದಿತಾವರೆ ಇದ್ದು ಅಲ್ಲಿ ಅವನಿಗೆ ಹೆಂಡತಿ , ಮಕ್ಕಳು ಮತ್ತು ಆಸ್ತಿ ಇರುತ್ತದೆ ಎನ್ನುವುದು ನಿಜ. ಆರೋಪಿ ಊರು ಬಿಟ್ಟು ಹೋಗಿರುತ್ತಾನೆ ಎಂದು ನನಗೆ ಯಾರು ಹೇಳಿರುತ್ತಾರೆ ಎಂದು ಗೊತ್ತಿಲ್ಲ. ಶ್ರೀನಿವಾಸ ರೈಸ್ ಮಿಲ್ ನಾಗೇಶ್ವರರಾವ್ ಇವರಿಗೆ ಸೇರಿದ್ದು ಎಂದು ಗೊತ್ತಿಲ್ಲ. ಸದರಿ ರೈಸ್ ಮಿಲ್ ನಂದಿತಾವರೆ ಗ್ರಾಮದಲ್ಲಿ ಎಲ್ಲಿ ಬರುತ್ತದೆ ಎಂದರೆ ಸಾಕ್ಷಿ 10 ವರ್ಷದ ಹಿಂದೆ ನೋಡಿದ್ದೆ ಹೇಳಲು ಆಗುವುದಿಲ್ಲ ಎಂದು ಹೇಳುತ್ತಾರೆ. ಶ್ರೀನಿವಾಸ ರೈಸ್ ಮಿಲ್ಲಿಗೆ ಹೋಗಿ ಗುಮಾಸ್ತ ಸುರೇಶ ಇವರಿಗೆ ಬಸವರಾಜ್ ಇವರ ಬಗ್ಗೆ ವಿಚಾರಿಸಿದೆ ಎಂದು ಪೋಲಿಸರಿಗೆ ಹೇಳಿದೀಯಾ ಅಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಆರೋಪಿ ನನಗೆ ಹಣ ಕೊಡುವುದರ ಬಗ್ಗೆ ಸಿವಿಲ್ ಕೇಸನ್ನು ಹಾಕಿಲ್ಲ. ಆರೋಪಿಗೆ ಭತ್ತ ಕೊಟ್ಟಿದ್ದೆ ಎನ್ನುವುದನ್ನು ತೋರಿಸಲು ಪೋಲಿಸರಿಗೆ ಖರೀದಿ ಚೀಟಿಯನ್ನು ಕೊಟ್ಟಿಲ್ಲ. ಆರೋಪಿಯಿಂದ ನಾನು 3,50,000/- ರೂ ಹಣ ಪಡೆದ ಕುರಿತು ದಾಖಲೆಯನ್ನು ಹಾಜರು ಪಡಿಸಿಲ್ಲ ನಾನು ಆರೋಪಿಗೆ ಭತ್ತ ಮಾರಾಟ ಮಾಡಿಲ್ಲ, ನನಗೆ ಆರೋಪಿ ಹಣ ಕೊಡುವುದು ಬಾಕಿ ಇಲ್ಲ ಮತ್ತು ಆರೋಪಿ ನನಗೆ ಮೋಸ ಮಾಡಿಲ್ಲ. ನಾನು ರೈತ ಸಂಘದವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ

ಹೇಳುತ್ತಿದ್ದೆನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹರಿಹರ